ಕಳೆದ ತಿಂಗಳು ೨೫ನೇ ತಾರೀಖಿಂ ನಡೆದ ಸಭೆಯಲ್ಲಿ ಉಭಯ ಪಾರ್ಟಿಗಳಿಗೂ ಒಪ್ಪಂದವಾಗಿದೆ. ನನ್ನ ಚೇಂಬರ್‌ನಲ್ಲೇ ಚರ್ಚೆ ಮಾಡಿ ತೀರ್ಮಾನ ಮಾಡಿದ್ದೇನೆ. ಕಾರ್ಖಾನೆಯನ್ನು ಪ್ರಾರಂಭ ಮಾಡುವುದಕ್ಕೆ ಆದಷ್ಟು ಒತ್ತಾಯವನ್ನು ಮಾಲೀಕರಿಗೆ ಹಾಕಿದ್ದೇನೆ.

ಶ್ರೀ ಎಂ. ಎಸ್. ಕೃಷ್ಣನ್.—೨೫ನೇ ತಾರೀಖಿಂ ನಡೆಸಿದ ಸಭೆಯಲ್ಲಿ ಒಪ್ಪಂದ ಆಯಿತು ಎಂದು ಹೇಳಿದ್ದೀರಿ. ಆ ಒಪ್ಪಂದದ ರೂಪುರೇಖೆಗಳೇನು ? ಮತ್ತು ಈ ಮಿಲ್ಲನ್ನು ಯಾವಾಗ ತೆಗೆಯುತ್ತಾರೆ ಎಂಬುದನ್ನು ಹೇಳುತ್ತೀರಾ ? ಯಾವ ತಾರೀಖಿನಂದಂ ಕಾರ್ಖಾನೆ ತೆರೆಯುವುದಕ್ಕೆ ಆಜ್ಞೆ ಮಾಡಿದ್ದೀರಿ ?

ಶ್ರೀ ಡಿ. ಮಂಜುನಾಥ್.—ಕೃಷ್ಣನ್ ಅವರು ನಿಜವಾಗಿ ನನಗೆ ಕಾಂಪ್ಲಿಮೆಂಟ್ ಮಾಡಬೇಕಾಗಿತ್ತು.

ಶ್ರೀ ಎಂ.ಎಸ್. ಕೃಷ್ಣನ್.—ಕಾಂಪ್ಲಿಮೆಂಟ್ ಮಾಡುತ್ತೇನೆ.

ಶ್ರೀ ಡಿ. ಮಂಜುನಾಥ್.—ನಾನಂ ಈ ವಿವಾದವನ್ನು ಅಧಿಕಾರಿಗಳಿಗೆ ಬಿಡದೆ ನಾನೇ ಸ್ವತ. ತೆಗೆದುಕೊಂಡು ಕನ್‌ಸಿಲಿಯೇಷನ್ ಮಾಡಿ ಒಪ್ಪಂದ ಮಾಡಿದ್ದೇನೆ. ಹಣಕಾಸಿನ ಪರಿಸ್ಥಿತಿಯಿಂದ ಸ್ವಲ್ಪ ನಿಧಾನವಾಗಿರಬಹುದು. ಆದಷ್ಟು ಜಾಗ್ರತೆ ಪ್ರಾರಂಭ ಮಾಡಂವುದಕ್ಕೆ ಒತ್ತಾಯ ಹಾಕಂತ್ತೇನೆ.

ಶ್ರೀ ಎಂ.ಎಸ್. ಕೃಷ್ಣನ್.—ವಂದನೆಗಳು.

ಗುಲ್ಬರ್ಗ ಹಾಗೂ ಚಿಂಚೋಳಿ ನಡುವೆ ಓಡಾಡುತ್ತಿರುವ ಕೆ. ಎಸ್. ಆರ್. ಟಿ. ಸಿ. ಬಸ್ಸುಗಳು.

೫೦೮. ಶ್ರೀ ವೀರಯ್ಯ ಸ್ವಾಮಿ (ಚಿಂಚೋಳಿ).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಶ್ರೀ ಸಾರಿಗೆ ಹಾಗೂ ವಸತಿ ರಾಜ್ಯ ಮಂತ್ರಿಗಳು ದಯೆಯಿಟ್ಟು ಉತ್ತರಿಸುವರೇ

ಅ) ಗುಲ್ಬರ್ಗಾ ಮತ್ತು ಚಿಂಚೋಳಿ ನಡುವೆ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯಂ ಸಂಚರಿಸುತ್ತಿರುವ ಬಸ್ಸುಗಳ ಸಂಖ್ಯೆ ಎಷ್ಟು ?

ಆ) ಸದರೀ ಬಸ್ಸುಗಳಿಂದ ಗಳಿಸಿದ ಆದಾಯವೆಷ್ಟು ?

ಇ) ಸದರೀ ಮಾರ್ಗಕ್ಕೆ ಹಳೆ ಬಸ್ಸುಗಳಂ ಕಳುಹಿಸುತ್ತಿರುವುದಕ್ಕೆ ಡಿಪೋ ವ್ಯವಸ್ಥಾಪಕರೇ ಜವಾಬ್ದಾರರೇ ?

ಈ) ಸದರೀ ಮಾರ್ಗಕ್ಕೆ ವಿಶೇಷವಾಗಿ ಯಾವ ಚಾಲಕನು ಖಾಸಗಿ ಮಾಲೀಕರಿಗೆ ಶಾಮೀಲಾಗಿ ಉದ್ದೇಶಪೂರ್ವಕವಾಗಿ ಬಸ್ಸಿನ ಸಂಚಾರದ ವೇಳೆಯಲ್ಲಿ ಕಾಲ ವಿಳಂಬಮಾಡುವರೊ ಅಂತಹವರನ್ನು ಮಾತ್ರ ಕಳುಹಿಸುತ್ತಿರುವುದು ನಿಜವೇ ?

ಉ) ಹಾಗಿದ್ದಲ್ಲಿ ಸರ್ಕಾರ ಕೈಕೊಂಡಿರುವ ಕ್ರಮವೇನು ?

ಶ್ರೀ ಪಿ. ಜಿ. ಆರ್. ಸಿಂಧ್ಯಾ (ಮಾನ್ಯ ಸಾರಿಗೆ ಮತ್ತು ವಸತಿ ರಾಜ್ಯ ಸಚಿವರು).—

ಅ) ಗುಲ್ಬರ್ಗಾದಿಂದ ಚಿಂಚೋಳ್ಳಿಗೆ ಹೋಗತಕ್ಕ ೪ಮಾರ್ಗಗಳಲ್ಲಿ ೧೨ ಬಸ್ಸುಗಳನ್ನು ಓಡಿಸಲಾಗುತ್ತಿದೆ.

ಆ) ಗುಲ್ಬರ್ಗಾ ಮತ್ತು ಚಿಂಚೋಳ್ಳಿ ನಡುವೆ ಸಂಚರಿಸುತ್ತಿರುವ ೧೨ ಬಸ್ಸುಗಳ ಸರಾಸರಿ ಆದಾಯ ದಿನ ಒಂದಕ್ಕೆ ರೂ. ೬೧೦–೭೦ಪೈಸೆ.

ಇ) ಇಲ್ಲ.

ಈ) ಸದರೀ ಮಾರ್ಗದಲ್ಲಿ ಸಂಚರಿಸುತ್ತಿರುವ ೪ಬಸ್ಸುಗಳಿಗೆ ನಾಲ್ಕು ಚಾಲಕರಿಗೆ ಖಾಯಂ ಆಗಿ ನೇಮಿಸಲಾಗಿದೆ. ಉಳಿದ ಬಸ್ಸುಗಳಿಗೆ ಪಾಳೆಯ ಪ್ರಕಾರ ಚಾಲಕರಿಗೆ ಕಳಾಹಿಸಲಾಗುತ್ತಿದೆ. ಆದರೆ ಶಾಮೀಲಾಗಿ ಉದ್ದೇಶಪೂರ್ವಕವಾಗಿ ಚಾಲಕರು ಕಾರ್ಯ ನಿರ್ವಹಿಸುತ್ತಿರುವ ಬಗ್ಗೆ. ಈ ಆರೋಪಂ ಯಾವ ರೀತಿಯ ನಿರ್ದಿಷ್ಟವಾದ ದೂರುಗಳು ಬಂದಿರುವುದಿಲ್ಲ.

ಉ) ಮೇಲಿನ ಉತ್ತರದಿಂದ ಉದ್ಭವಿಸುವುದಿಲ್ಲ.

ಶ್ರೀ ವೀರಯ್ಯಸ್ವಾಮಿ.— ಮಾನ್ಯ ಮಂತ್ರಿಗಳು ೧೨ಬಸ್ಸುಗಳ ಸರಾಸರಿ ಆದಾಯ ಕೇವಲ ೬೦೦ ರೂಪಾಯಿ ಎಂದು ಹೇಳಿದ್ದಾರೆ. ಹಾಗೂ ಸದರಿ ಮಾರ್ಗದಲ್ಲಿ ಸಂಚರಿಸುತ್ತಿರುವ ೬ಬಸ್ಸುಗಳಿಗೆ ನಾಲ್ಕು ಚಾಲಕರಿಗೆ ಖಾಯಂ ಆಗಿ ನೇಮಿಸಲಾಗಿದೆ ಎಂದೂ ಹೇಳಿದ್ದಾರೆ. ಚಾಲಕರು ಶಾಮೂಲಾಗಿ ಕಾರ್ಯ ನಿರ್ವಹಿಸುತ್ತಿರುವುದರಿಂದ ಈ ರೀತಿ ಜೊಂದರೆಯಾಗುತ್ತಿದೆ ಎಂಬುದು ನಿರ್ದಿಷ್ಟವಾಗಿ ತಿಳಿದು ಬಂದಿದೆ. ಇದೇ ಮಾರ್ಗದಲ್ಲಿ ೧೫–೨೦ ಖಾಸಗಿ ಬಸ್ಸುಗಳು ಲಾಭದಾಯಕವಾಗಿ ನಡೆಯುತ್ತಿದೆ. ಆದರೆ ಅಲ್ಲಿ ಹಳೇ ಬಸ್ಸುಗಳನ್ನು ಹಾಕುತ್ತಿರುವುದರಿಂದ ಜನ ಅದಕ್ಕೆ ಹೋಗುವುದಿಲ್ಲ ಎಂದು ಹೇಳುತ್ತಿದ್ದಾರೆ. ಆದ್ದರಿಂದ ದಯವಿಟ್ಟು ಇದನ್ನು ಸರಿಪಡಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಪಿ. ಜಿ. ಆರ್. ಸಿಂಧ್ಯ.— ಮಾನ್ಯ ಸದಸ್ಯರು ಹೇಳಿರತಕ್ಕ ವಿಚಾರವನ್ನು ನಾನು ಸಹ ಒಪ್ಪುತ್ತೇನೆ. ಅನೇಕ ಕಡೆಗಳಲ್ಲಿ ಖಾಸಗಿ ಬಸ್ ಮಾಲೀಕರ ಜೊತೆಯಲ್ಲಿ ಡಿಪೋ ಮ್ಯಾನೇಜರ್ ಇರಬಹುದು, ಕಂಡಕ್ಟರುಗಳಿರಬಹುದು ಅಥವಾ ಚಾಲಕರಿರಬಹುದು ಒಂದಾಗಿ ಈ ರೀತಿ ಮಾಡುತ್ತಿರುವುದು ನಿಜ. ಆದರೆ ನಿರ್ದಿಷ್ಟವಾದ ದೂರುಗಳು ನನಗೆ ಬಂದಿಲ್ಲ ಎಂದು ಹೇಳಿದ್ದೇನೆಯೇ ಹೊರತು ಅವರು ಮಾಡುತ್ತಿಲ್ಲ ಎಂದು ಹೇಳುತ್ತಿಲ್ಲ. ಬಹಳಷ್ಟು ಕಡೆ ಈ ರೀತಿಯ ದೂರುಗಳನ್ನು ನಾನು ಕೇಳಿದ್ದೇನೆ. ಮತ್ತು ಸಾರಿಗೆ ಸಂಸ್ಥೆ ನಷ್ಟವಾಗುವುದಕ್ಕೆ ಇದೇ ಕಾರಣ ಎಂಬುದು ಗೊತ್ತು. ಆದ್ದರಿಂದ ಮಾನ್ಯ ಸದಸ್ಯರು ಸಹಕಾರ ಕೊಟ್ಟರೆ ಇಂಥವರು ಈ ರೀತಿ ಮಾಡುತ್ತಿದ್ದಾರೆ ಎಂದು ದೂರುಗಳನ್ನು ನಿರ್ದಿಷ್ಟವಾಗಿ ಕೊಟ್ಟರೆ ನಾನು ಓಡಿಪೋಗಳ ರೆವ್ಯೂ ಮಾಡುವಾಗ ಈ ರೀತಿ ಆಗದಂತೆ ನೋಡಿಕೊಳ್ಳುವುದಕ್ಕೆ ಪ್ರಯತ್ನಪಡಂತ್ತೇನೆ.

ಶ್ರೀ ವೀರಯ್ಯಸ್ವಾಮಿ.— ಚಾಲಕರನ್ನು ರೊಟೇಷನ್ ಪ್ರಕಾರ ಹಾಕಿದರೆ ಇದನ್ನು ತಪ್ಪಿಸಬಹುದು.

ಶ್ರೀ ಪಿ. ಜಿ. ಆರ್. ಸಿಂಧ್ಯ.— ತಕ್ಷಣ ಅದನ್ನು ಮಾಡಿಸುತ್ತೇನೆ.

Breaching of Millaghatta Tank in Shimoga City.

649. SRI K. H. SRINIVASA (Shimoga).— Will the minister for Urban Development and Law and parlimentary Affair be pleased to state.—

a) whether there was a decision of Government during 1978–79 to breach the Millaghatta Tank in Shimoga City, to acquire the achkat and hand over the Tank bed and the achkat to the Shimoga City Municipality for formation of sites. (copy of the G.O., may kindly be furnished)

b) the reasons for not implementing the decision so far

c) whether the Government is aware that the said proposal is pending since a long time

d) whether the Government would take immediate steps for breaching the tank

SRI A. LAKSHMI SAGAR.— Minister for Urban Development.

a) Government in their order No. PWD 16 MSP 79 dt. 3-4-79 has ordered for breaching of Millaghatta Tank and to hand over to City Municipal Council, Shimoga for formation of Sites, free of cost.